ಸಾಂಪ್ರದಾಯಿಕ ಹಾಗೂ ಆಧುನಿಕ ಮನೋಭಾವದವರನ್ನು ಬಹುವಾಗಿ ಸೆಳೆಯುವ ಸೀರೆಯಲ್ಲಿ ನೂರಾರು ವೈವಿಧ್ಯಗಳಿವೆ. ಅನಾದಿ ಕಾಲದಿಂದಲೂ ಮಹಿಳೆಯರ ಮೆಚ್ಚಿನ ಉಡುಪಾಗಿರುವ ವೈವಿಧ್ಯಮಯ ಸೀರೆಗಳಿಗೆ ಇದೀಗ ಕುಂದಲಮ್, ಮಂಗಳಗಿರಿ, ಬೊಮ್ಮಾಯಿ ಸೀರೆಗಳು ಹೊಸ ಸೇರ್ಪಡೆ.

# ಅಂದಕ್ಕೆ ಕುಂದಲಮ್ ಸೀರೆ

■ ಉಮಾ ಅನಂತ್



ಸೀರೆಯಲ್ಲಿ ಅದೆಷ್ಟು ವೈವಿಧ್ಯತೆ! ಸಾಂಪ್ರದಾಯಿಕ ಹಾಗೂ ಆಧುನಿಕ ಮನೋಭಾವದ ಮಹಿಳೆಯರನ್ನು ಬಹುವಾಗಿ ಸೆಳೆಯುವ ಸೀರೆ ಫ್ಯಾಷನ್ ಜಗತ್ತಿನಲ್ಲಿ ಎಂದೆಂದೂ ಔಟ್‌ಡೇಟೆಡ್ ಆಗದೇ ಇರುವಂಥ ಉಡುಗೆ. ರೇಷ್ಮೆ ಸೀರೆ 'ಸೀರೆಗಳ ರಾಣಿ' ಆದರೆ ಖಾದಿ ಸೀರೆ, ಎಥ್ನಿಕ್ ಸೀರೆ, ಕಾಟನ್ ಸೀರೆ, ಪಾಲಿಯೆಸ್ಟರ್, ವಾಯಿಲ್, ನೈಲಾನ್ ಸೀರೆಗಳು ವೈವಿಧ್ಯಗಳ ಸಾಲಿಗೆ ಸೇರುತ್ತವೆ.

ಸೀರೆಗಳು ಸಂಪ್ರದಾಯಕ್ಕೆ, ಫ್ಯಾಷನ್‌ಗೆ, ನೃತ್ಯ ಪಟುಗಳಿಗೆ, ಆಧುನಿಕ ಮನೋಭಾವದ ಮಹಿಳೆಯರಿಗೆ, ಸೆಲೆಬ್ರಿಟಿಗಳಿಗೆ, ಸಿನಿಮಾ ತಾರೆಗಳಿಗೆ.. ಹೀಗೆ ಸಮಾಜದ ಎಲ್ಲ ಸ್ತರದ ಮಹಿಳೆಯರಿಗೆ ಸೂಕ್ತವಾಗುವಂತಿವೆ. ಈ ಸೀರೆ ವೈವಿಧ್ಯಗಳು ಬಹಳ ಬೇಗ ಜನಪ್ರಿಯವಾಗುತ್ತಿದೆ. ವಿನ್ಯಾಸ, ಬಣ್ಣಗಳಲ್ಲಿ ತರಾವರಿ ಸಂಖ್ಯೆಯಲ್ಲಿರುವ ಸೀರೆ ಜಗತ್ತಿಗೆ ಬೊಮ್ಮಾಯಿ ಸೀರೆ, ಕುಂದಲಮ್ ಸೀರೆ, ಮಂಗಳಗಿರಿ ಸೀರೆಗಳೂ ಸೇರಿಕೊಂಡು ಫ್ಯಾಷನ್ ಜಗತ್ತಿನಲ್ಲಿ ಮಿಂಚುತ್ತಿವೆ. ಮಹಿಳೆಯರ ಆಯ್ಕೆ, ಆದ್ಯತೆಗಳನ್ನೂ ಹೆಚ್ಚು ಮಾಡುತ್ತಿವೆ.

## ಅಂದದ ಕುಂದಲಮ್

ಸಾಂಪ್ರದಾಯಿಕ ಮತ್ತು ಸಮಕಾಲೀನ ವಸ್ತ್ರಪರಂಪರೆಯ ಪ್ರೇರಣೆಯಿಂದ ರೂಪಿತಗೊಂಡಿರುವುದು ಕುಂದಲಮ್ ಸೀರೆ. ಕುಂದಲಮ್ ವೈವಿಧ್ಯದಲ್ಲಿ ರೇಷ್ಮೆಯ ದಾರ, ಗೋಟಾ ಪೆಟಲ್ಸ್, ಜರ್ದೋಸಿ ಮತ್ತು ಸೀಕ್ವೆನ್ಸ್ ಸೀರೆಗಳಿವೆ. ರೇಷ್ಮೆ, ಕಾಟನ್ ಸಿಲ್ಕ್, ಕಾಂಜೀವರಂ ಸೀರೆಗಳಂತೆ ಕುಂದಲಮ್ ಸೀರೆಯನ್ನು ಮದುವೆ, ಮುಂಜಿಗಳಂತಹ ವಿಶೇಷ ಸಂದರ್ಭಗಳಲ್ಲಿ ಧರಿಸಬಹುದು. ಇದಕ್ಕೆ ಸರಿಹೊಂದುವ ಅಥವಾ ಕಾಂಟ್ರಾಸ್ಟ್ ಇರುವ ಬ್ಲೌಸ್ ತೊಟ್ಟು, ಕಣ್ಣಿಗೊಪ್ಪುವ ಆಭರಣಗಳನ್ನು ತೊಟ್ಟರೆ ಹೆಂಗಳೆಯರ ಮಧ್ಯೆ ಎದ್ದು ಕಾಣುವುದರಲ್ಲಿ ಸಂಶಯವಿಲ್ಲ.

ಕುಂದಲಮ್ ಸೀರೆಯಲ್ಲಿ ಕೈಕುಸುರಿಯಿಂದ ಮಾಡಿದ ಎಂಬ್ರಾಯಿಡರಿ ಇದ್ದು, ಆಧುನಿಕ ಮತ್ತು ಸಾಂಪ್ರದಾಯಿಕ ಎರಡೂ ಮನೋಭಾವದ ಮಹಿಳೆಯರಿಗೆ ಒಪ್ಪುವಂಥದ್ದು. ಯುವತಿಯರಿಗೆ ಹಾಗೂ ಕಾಲೇಜು ಹೋಗುವ ಹುಡುಗಿಯರಿಗೆ ಕೂಡ ಎಲಿಗೆಂಟ್ ಲುಕ್ ಕೊಡುವ ಕುಂದಲಮ್ ಸೀರೆ ಇದೀಗ ಫ್ಯಾಷನ್ ಪ್ರಪಂಚದಲ್ಲಿ ಹೊಸ ಟ್ರೆಂಡ್ ಅನ್ನೇ ಸೃಷ್ಟಿಸಿದೆ.

ಹ್ಯಾಂಡ್‌ಲೂಮ್ ಕಾಟನ್ ಬಟ್ಟೆಯಿಂದಲೂ ಸೀರೆಯ ವಿನ್ಯಾಸ ಮಾಡಲಾಗಿದೆ. ಇದಕ್ಕೆ ಒಪ್ಪುವಂತಹ ಹಾಗೂ ಕಾಂಟ್ರಾಸ್ಟ್ ಇರುವಂತಹ ಬಣ್ಣದ ಬಟ್ಟೆಯ ಮೇಲೆ ಕುಸುರಿಕಲೆಯ ಬ್ಲೌಸ್ ಸೂಕ್ತವಾದ ಕಾಂಬಿನೇಷನ್. ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲೂ ಕುಂದಲಮ್ ಸೀರೆ ಹೇಳಿಮಾಡಿಸಿದಂತಿದೆ.

## ಬೊಮ್ಮಾಯಿ ಸೀರೆ!

ಬೊಮ್ಮಾಯಿ ಸೀರೆಯ ಮೂಲ ಒರಿಸ್ಸಾದ್ದು. ಕೈಮಗ್ಗದ ಸೀರೆಗಳಿಗೆ ಜನಪ್ರಿಯವಾಗಿರುವ ಒರಿಸ್ಸಾದ ಬೊಮ್ಮಾಯಿ ಸೀರೆಗಳು ಎಥ್ನಿಕ್ ಉಡುಪಿನಂತೆಯೂ ಶೋಭಿಸುತ್ತವೆ. ಈ ಸೀರೆಗಳು ಮದುವೆ ಮುಂಜಿಗಳಂಥ ಶುಭ ಸಮಾರಂಭಗಳಿಗೆ ಮಾತ್ರವಲ್ಲದೆ ವಿಶೇಷ ಸಂದರ್ಭಗಳಲ್ಲಿ ಪಾರ್ಟಿವೇರ್ ಆಗಿಯೂ ಜನಪ್ರಿಯವಾಗುತ್ತಿವೆ. ಅಲ್ಲದೆ ಬೊಮ್ಮಾಯಿ ಸೀರೆಗಳಿಗೆ ವಯೋಮಾನದ ಹಂಗಿಲ್ಲ. ಹದಿಹರೆಯದ ಹುಡುಗಿಯಿಂದ ಹಿಡಿದು ಎಪ್ಪತ್ತರ ಅಜ್ಜಿಯವರೆಗೂ ಎಲ್ಲರೂ ಉಡಬಹುದು.ಬಣ್ಣ, ವಿನ್ಯಾಸ, ಸ್ಟೈಲ್, ಗ್ಲಾಮರ್ ಮೊದಲಾದ ಲೆಕ್ಕಾಚಾರಗಳಿಂದ ಸೀರೆ ಕೊಳ್ಳುವವರಿಗೆ ಇದು ಉತ್ತಮ ಆಯ್ಕೆ.

